ಕರ್ನಾಟಕ ಸರ್ಕಾರ

# ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996

(31.05.2021 ರಲ್ಲಿದ್ದಂತೆ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವಾ ನಿಯಮಗಳು)

ಕರ್ನಾಟಕ ಸಿವಿಲ್ ಸೇವೆಗಳ (ಅನುಕಂಪ ಆಧಾರದ

ಮೇಲೆ ನೇಮಕಾತಿ) ನಿಯಮಗಳು, 1996.

ಡಿಪಿಎಆರ್ 100 ಎಸ್‌ಸಿಎ 95, ದಿನಾಂಕ: 12ನೇ ಸೆಪ್ಟೆಂಬರ್ 1996.

ತಿದ್ದುಪಡಿಗಳು

1. ಡಿಪಿಎಆರ್ 11 ಎಸ್‌ಸಿಎ 97, ದಿನಾಂಕ: 31.03.1999 ಜಿಟಿಡಿ 01.04.1999
2. ಡಿಪಿಎಆರ್ 19 ಎಸ್‌ಸಿಎ 99, ದಿನಾಂಕ: 24.11.2000 ಜಿಟಿಡಿ 28.11.2000
3. ಡಿಪಿಎಆರ್ 11 ಎಸ್‌ಸಿಎ 2001, ದಿನಾಂಕ: 28.05.2002 ಜಿಟಿಡಿ 29.05.2002
4. ಡಿಪಿಎಆರ್ 118 ಎಸ್‌ಸಿಎ 2009, ದಿನಾಂಕ: 28.06.2010 ಜಿಟಿಡಿ 03.07.2010
5. ಡಿಪಿಎಆರ್ 12 ಎಸ್‌ಸಿಎ 2010, ದಿನಾಂಕ: 27.07.2010 ಜಿಟಿಡಿ 29.07.2010
6. ಡಿಪಿಎಆರ್ 55 ಎಸ್‌ಸಿಎ 2012, ದಿನಾಂಕ: 11.07.2012 ಜಿಟಿಡಿ 12.07.2012
7. ಡಿಪಿಎಆರ್ 78 ಎಸ್‌ಸಿಎ 2011, ದಿನಾಂಕ: 13.10.2011 ಜಿಟಿಡಿ 14.10.2011(ಬಿಟ್ಟುಬಿಡಲಾಗಿದೆ)
8. ಡಿಪಿಎಆರ್ 46 ಎಸ್‌ಸಿಎ 2012, ದಿನಾಂಕ: 07.08.2014 ಜಿಟಿಡಿ 04.09.2014 (ಬಿಟ್ಟುಬಿಡಲಾಗಿದೆ)
9. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.04.2021 ಜಿಟಿಡಿ 09.04.2021

## ಕರ್ನಾಟಕ ಸರ್ಕಾರ

## ಕರ್ನಾಟಕ ಸಿವಿಲ್ ಸೇವೆಗಳ (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996

**ಅಧಿಸೂಚನೆ ಸಂಖ್ಯೆ. ಡಿಪಿಎಆರ್ 100 ಎಸ್‌ಸಿಎ 65, ದಿನಾಂಕ: 12ನೇ ಸೆಪ್ಟೆಂಬರ್ 1996.**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಸಿವಿಲ್ ಸೇವೆಗಳ (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ ಕರಡನ್ನು, ಅಧಿಸೂಚನೆ ಸಂಖ್ಯೆ. ಡಿಪಿಎಆರ್ 100 ಎಸ್‌ಸಿಎ 95. ದಿನಾಂಕ: 23ನೇ ಮಾರ್ಚ್, 1966ರಲ್ಲಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ 2ಸಿ(i) ನೇ ಪ್ರಕರಣದ ಭಾಗ IV ರಲ್ಲಿ ದಿನಾಂಕ 23ನೇ ಮಾರ್ಚ್ 1996ರಂದು, ಸರ್ಕಾರಿ ರಾಜ್ಯಪತ್ರದಲ್ಲಿ ಕರಡನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ.

ಸದರಿ ರಾಜ್ಯಪತ್ರವನ್ನು 23ನೇ ಮಾರ್ಚ್ 1996 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು ಸ್ವೀಕರಿಸಿದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ.

ಈಗ, ಆದ್ದರಿಂದ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

### ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-**

(1) ಈ ನಿಯಮಗಳನ್ನು, ಕರ್ನಾಟಕ ಸಿವಿಲ್ ಸೇವೆಗಳ (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಸರ್ಕಾರಿ ರಾಜ್ಯಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.[*]

(3) ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ ಮೇರೆಗೆ ಯಾವುದೇ ಸೇವೆ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರಚಿಸಲಾಗಿದೆಯೆಂದು ಭಾವಿಸಲಾದ ನೇಮಕಾತಿ ನಿಯಮಗಳಲ್ಲಿ, ಏನೇ ಒಳಗೊಂಡಿದ್ದಾಗ್ಯೂ. ಈ ನಿಯಮಗಳು, ಅನುಕಂಪ ಆಧಾರದ ಮೇಲೆ ಮೃತ ಸರ್ಕಾರಿ ನೌಕರನ ಅವಲಂಬಿತರ ನೇಮಕಾತಿಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು:-**

(1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:-

[1][(ಎ) "ಮೃತ ಸರ್ಕಾರಿ ನೌಕರರ ಅವಲಂಬಿತ "ಎಂದರೆ ಮೃತ ಸರ್ಕಾರಿ ನೌಕರನೊಂದಿಗೆ ವಾಸಿಸುತ್ತಿದ್ದ ಮತ್ತು ಅವರ ಮೇಲೆ ಅವಲಂಬಿತರಾಗಿದ್ದ ಮತ್ತು 4ನೇ ನಿಯಮದ (1)ನೇ ಉಪ-ನಿಯಮದ ವಿವರಣೆಯಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿರುವ ಮೃತ ಸರ್ಕಾರಿ ನೌಕರನ ಕುಟುಂಬದ ಸದಸ್ಯ.][1]

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ:09.04.2021ರ ಮೂಲಕ ಪ್ರತ್ಯಾಯೋಜಿಸಲಾಗಿದೆ.

[1]["(ಬಿ) ಈ ನಿಯಮಗಳ ಉದ್ದೇಶಕ್ಕಾಗಿ "ಕುಟುಂಬ" ಎಂದರೆ,-

(i) ಮೃತ ಪುರುಷ ವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ, ಅವನ ಮೇಲೆ ಅವಲಂಬಿತರಾಗಿದ್ದ ಮತ್ತು ಅವನೊಂದಿಗೆ ವಾಸಿಸುತ್ತಿದ್ದ ಅವನ ವಿಧವೆ, ಮಗ ಮತ್ತು ಮಗಳು (ಅವಿವಾಹಿತ/ವಿವಾಹಿತ/ವಿಚ್ಛೇದಿತ/ವಿಧವೆ);

(ii) ಮೃತ ಮಹಿಳಾ ವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸಿಸುತ್ತಿದ್ದ ಆಕೆಯ ಮಗ, ಮಗಳು (ಅವಿವಾಹಿತ/ವಿವಾಹಿತ/ವಿಚ್ಛೇದಿತ/ವಿಧವೆ) ಮತ್ತು ವಿಧುರ;

(iii) ಮೃತ ಪುರುಷ ಅವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ, ಅವನ ಮೇಲೆ ಅವಲಂಬಿತರಾಗಿದ್ದ ಮತ್ತು ಅವನೊಂದಿಗೆ ವಾಸಿಸುತ್ತಿದ್ದ ಅವನ ಸಹೋದರ ಅಥವಾ ಸಹೋದರಿ;

(iv) ಮೃತ ಮಹಿಳಾ ಅವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ, ಅವಳ ಮೇಲೆ ಅವಲಂಬಿತರಾಗಿದ್ದ ಮತ್ತು ಅವಳೊಂದಿಗೆ ವಾಸಿಸುತ್ತಿದ್ದ ಅವಳ ಸಹೋದರ ಅಥವಾ ಸಹೋದರಿ; ಮತ್ತು

(v) ಪತಿ/ಪತ್ನಿ ಬದುಕಿಲ್ಲದ ಮತ್ತು ಅಪ್ರಾಪ್ತ ಮಕ್ಕಳಿರುವ ಮೃತ ವಿವಾಹಿತ ಸರ್ಕಾರಿ ನೌಕರನ/ಳ ಸಂದರ್ಭದಲ್ಲಿ, ಅಪ್ರಾಪ್ತ ಮಕ್ಕಳೊಂದಿಗೆ ಮತ್ತು ಸಂಬಂಧಪಟ್ಟ ಕಾನೂನಿನ ಉಪಬಂಧಗಳ ಅನುಸಾರ ಅಪ್ರಾಪ್ತ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುತ್ತಿರುವ ಪ್ರಮಾಣಿತ ಪೋಷಕರು.][1]

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸದ ಪದಗಳು ಮತ್ತು ಅಭಿವ್ಯಕ್ತಿಗಳಿಗೆ, ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಅವುಗಳಿಗೆ ನೀಡಲಾದಂಥ ಅರ್ಥವನ್ನೇ ಹೊಂದಿರತಕ್ಕದ್ದು.

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.04.2021ರ ಮೂಲಕ ಪ್ರತ್ಯಾಯೋಜಿಸಲಾಗಿದೆ.

**3. ನೇಮಕಾತಿಗಾಗಿ ಅರ್ಹತೆ:-**

(1) ಈ ನಿಯಮಗಳ ಮೇರೆಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಹಕ್ಕಾಗಿ ಕ್ಲೇಮು ಮಾಡತಕ್ಕದ್ದಲ್ಲ ಮತ್ತು ಸಹಜವಾಗಿಯೇ ಬಂದಿದೆ ಎಂಬಂತೆ ನೀಡತಕ್ಕದ್ದಲ್ಲ.

(2) ಈ ನಿಯಮಗಳ ಮೇರೆಗೆ ನೇಮಕಾತಿಯನ್ನು, ಕೆಳಕಂಡ ಪ್ರಾಶಸ್ತ್ಯ ಕ್ರಮದಲ್ಲಿ ಮೃತ ಸರ್ಕಾರಿ ನೌಕರನ/ಳ ಅವಲಂಬಿತರಿಗೆ ನಿರ್ಬಂಧಿಸತಕ್ಕದ್ದು, ಎಂದರೆ:-

[1][(i) ಮೃತ ಪುರುಷ ವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ,-

ಅವನ ಮೇಲೆ ಅವಲಂಬಿತರಾಗಿದ್ದ ಮತ್ತು ಅವನೊಂದಿಗೆ ವಾಸಿಸುತ್ತಿದ್ದ

(ಎ) ವಿಧವೆ; ಮತ್ತು

(ಬಿ) ವಿಧವೆಯು ಅರ್ಹಳಾಗಿರದಿದ್ದರೆ ಅಥವಾ ಯಾವುದೇ ಸಮಂಜಸ ಕಾರಣಕ್ಕಾಗಿ ಅವಳು ನೇಮಕಾತಿಯನ್ನು ಸ್ವೀಕರಿಸಲು ಇಚ್ಛಿಸದಿದ್ದರೆ, ಮೃತ ಸರ್ಕಾರಿ ನೌಕರನ ವಿಧವೆಯು ಆಯ್ಕೆ ಮಾಡಿದ ಮಗ ಅಥವಾ ಮಗಳು".

ಟಿಪ್ಪಣಿ: ಪತಿ/ಪತ್ನಿ ಈ ಹಿಂದೆಯೇ ಮೃತರಾಗಿದ್ದ ಸಂದರ್ಭದಲ್ಲಿ, ಆಗ ಮಕ್ಕಳ ವಯಸ್ಸಿನ ಕ್ರಮದಲ್ಲಿ ಪ್ರಾಶಸ್ತ್ಯವನ್ನು ಕೊಡತಕ್ಕದ್ದು.

"(iಎ) ಮೃತ ಪುರುಷ ಅವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ, ತಂದೆ ಮತ್ತು ತಾಯಿಯು ಆಯ್ಕೆ ಮಾಡಿರುವ ಅಥವಾ ಅವರಲ್ಲಿ ಭಿನ್ನಾಭಿಪ್ರಾಯವಿದ್ದ ಸಂದರ್ಭದಲ್ಲಿ, ಅವನ ಮೇಲೆ ಅವಲಂಬಿತವಾಗಿದ್ದ ಮತ್ತು ಅವನೊಂದಿಗೆ ವಾಸಿಸುತ್ತಿದ್ದ ತಾಯಿಯು ಆಯ್ಕೆ ಮಾಡಿರುವ ಅವನ ಸಹೋದರ ಅಥವಾ ಸಹೋದರಿ".

ಟಿಪ್ಪಣಿ: ತಂದೆ-ತಾಯಿಗಳು, ಈ ಹಿಂದೆಯೇ ಮೃತರಾಗಿದ್ದ ಸಂದರ್ಭದಲ್ಲಿ, ಆಗ, ಸಹೋದರ/ಸಹೋದರಿಯ ವಯಸ್ಸಿನ ಕ್ರಮದಲ್ಲಿ ಪ್ರಾಶಸ್ತ್ಯವನ್ನು ಕೊಡತಕ್ಕದ್ದು.

"(ii) ಮೃತ ಮಹಿಳಾ ವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ;

ಅವಳ ಮೇಲೆ ಅವಲಂಬಿತರಾಗಿದ್ದ ಮತ್ತು ಅವಳೊಂದಿಗೆ ವಾಸಿಸುತ್ತಿದ್ದ,

(ಎ) ಮೃತ ಸರ್ಕಾರಿ ನೌಕರಳ ವಿಧುರನು ಆಯ್ಕೆ ಮಾಡಿರುವ ಮಗ ಅಥವಾ ಮಗಳು; ಮತ್ತು

(ಬಿ) ಮಗ ಅಥವಾ ಮಗಳು ಅರ್ಹರಾಗಿರದಿದ್ದರೆ ಅಥವಾ ಯಾವುದೇ ಸಮಂಜಸ ಕಾರಣಕ್ಕಾಗಿ ಅವರು, ನೇಮಕಾತಿಯನ್ನು ಸ್ವೀಕರಿಸಲು ಇಚ್ಛಿಸದಿದ್ದರೆ; ವಿಧುರ".

ಟಿಪ್ಪಣಿ: ಪತಿ/ಪತ್ನಿ ಈ ಹಿಂದೆಯೇ ಮೃತರಾಗಿದ್ದ ಸಂದರ್ಭದಲ್ಲಿ, ಆಗ ಮಕ್ಕಳ ವಯಸ್ಸಿನ ಕ್ರಮದಲ್ಲಿ ಪ್ರಾಶಸ್ತ್ಯವನ್ನು ಕೊಡತಕ್ಕದ್ದು.][1]

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.02.2021ರ ಮೂಲಕ ಪ್ರತ್ಯಾಯೋಜಿಸಲಾಗಿದೆ.

[1][(iiಎ)ಮೃತ ಮಹಿಳಾ ವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ, ತಂದೆ ಮತ್ತು ತಾಯಿಯು ಆಯ್ಕೆ ಮಾಡಿದಂತಹ ಅಥವಾ ಅವರಲ್ಲಿ ಭಿನ್ನಾಭಿಪ್ರಾಯವಿದ್ದ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತವಾಗಿದ್ದ ಮತ್ತು ಆಕೆಯೊಂದಿಗೆ ವಾಸಿಸುತ್ತಿದ್ದ, ತಾಯಿಯು ಆಯ್ಕೆ ಮಾಡಿದಂಥ ಆಕೆಯ ಸಹೋದರ ಅಥವಾ ಸಹೋದರಿ]

ಟಿಪ್ಪಣಿ: ಒಂದು ವೇಳೆ ಪೋಷಕರು ಈ ಹಿಂದೆಯೇ ಮೃತರಾಗಿದ್ದ ಸಂದರ್ಭದಲ್ಲಿ, ಪ್ರಾಶಸ್ತ್ಯವನ್ನು ಸಹೋದರ/ಸಹೋದರಿಯ ವಯಸ್ಸಿನ ಕ್ರಮದಲ್ಲಿ ನೀಡತಕ್ಕದ್ದು.][1]

[2][(iii) ಪತಿ/ಪತ್ನಿಯು ಸಹ ಮೃತರಾಗಿರುವಂಥ ಮತ್ತು ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಹೊಂದಿರುವಂಥ ಮೃತ ವಿವಾಹಿತ ಸರ್ಕಾರಿ ನೌಕರರ ಸಂದರ್ಭದಲ್ಲಿ, ಅವರೊಂದಿಗೆ ವಾಸವಿರುವಂಥ ಮತ್ತು ಸಂಬಂಧಪಟ್ಟ ಕಾನೂನಿನ ಉಪಬಂಧಗಳ ಅನುಸಾರ ಅಪ್ರಾಪ್ತ ವಯಸ್ಸಿನ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವಂಥ ಅಪ್ರಾಪ್ತ ವಯಸ್ಸಿನ ಮಕ್ಕಳ ಪ್ರಮಾಣೀಕರಿಸಿದ ಪಾಲಕರು.][2]

(3) [3][XXXXX][3] ಬಿಟ್ಟುಬಿಡಲಾಗಿದೆ

[1][.(4) ಅರ್ಜಿ ಸಲ್ಲಿಸುವ ಸಮಯದಲ್ಲಿ, ಮೃತ ಸರ್ಕಾರಿ ನೌಕರನನ್ನು ಕೊಲೆ ಮಾಡಿರುವಂತಹ ಅಥವಾ ಕ್ರಿಮಿನಲ್ ಪ್ರಕರಣ ತನಿಖೆಯಲ್ಲಿರುವ ಅಥವಾ ಅಂತಹ ಅಪರಾಧವನ್ನು ಮಾಡಲು ದುಷ್ಪ್ರೇರಣೆ ಮಾಡಿರುವ ಆರೋಪದ ಮೇಲೆ ವಿಚಾರಣೆಯು ನಡೆಯುತ್ತಿರುವ ವ್ಯಕ್ತಿಯು, ಈ ನಿಯಮಗಳ ಅಡಿಯಲ್ಲಿ ನೇಮಕಾತಿಗೆ ಅರ್ಹನಾಗಿರತಕ್ಕದ್ದಲ್ಲ.][1]

**3ಎ**. [3][XXXXX][3] ಬಿಟ್ಟುಬಿಡಲಾಗಿದೆ

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.04.2021ರ ಮೂಲಕ ಪ್ರತ್ಯಾಯೋಜಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.04.2021ರ ಮೂಲಕ ಸೇರಿಸಲಾಗಿದೆ.
3. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.04.2021ರ ಮೂಲಕ ಬಿಟ್ಟುಬಿಡಲಾಗಿದೆ.

**4. ನೇಮಕಾತಿಯ ಷರತ್ತುಗಳು:-**

ಈ ನಿಯಮಗಳ ಮೇರೆಗೆ ಅನುಕಂಪ ಆಧಾರಿತ ನೇಮಕಾತಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಎಂದರೆ:-

(1) ಮೃತ ಸರ್ಕಾರಿ ನೌಕರನ ಕುಟುಂಬವು ಹಣಕಾಸಿನ ಮುಗ್ಗಟ್ಟು ಅಥವಾ ಅಸಹಾಯಕ ಪರಿಸ್ಥಿತಿಯಲ್ಲಿರತಕ್ಕದ್ದು.

**ವಿವರಣೆ.-** (ಎ) ಮೃತ ಸರ್ಕಾರಿ ನೌಕರನ ಕುಟುಂಬವು, ಅನುಕಂಪ ಆಧಾರಿತ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಂದು ಇದ್ದಂತೆ, ಒಂದು ವೇಳೆ ಎಲ್ಲ ಮೂಲಗಳಿಂದ ಕುಟುಂಬದ ಮಾಸಿಕ ಸಂಚಿತ ಆದಾಯವು ಪ್ರಥಮ ದರ್ಜೆ ಸಹಾಯಕ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಮತ್ತು ಗರಿಷ್ಠ ಸರಾಸರಿಯ ಮೇಲೆ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ಬೆಂಗಳೂರಿನಲ್ಲಿ ಅಂಗೀಕಾರಾರ್ಹವಾದ ನಗರ ಪರಿಹಾರ ಭತ್ಯೆಯನ್ನು ಒಳಗೊಂಡಂತೆ ಒಟ್ಟು ಉಪ-ಲಬ್ದಿಗಳಿಗಿಂತ ಕಡಿಮೆ ಇದ್ದರೆ, ಅದನ್ನು ಹಣಕಾಸಿನ ಬಿಕ್ಕಟ್ಟಿನಲ್ಲಿದೆ ಅಥವಾ ಅಸಹಾಯಕ ಪರಿಸ್ಥಿತಿಯಲ್ಲಿದೆ ಎಂದು ಪರಿಗಣಿಸತಕ್ಕದ್ದು. ಅಂತಹ ಮಾಸಿಕ ಆದಾಯವನ್ನು ಲೆಕ್ಕಹಾಕುವುದಕ್ಕಾಗಿ ಕುಟುಂಬ ಪಿಂಚಣಿ ಯೋಜನೆ, ಒಟ್ಟು ಮೊತ್ತದ ಪಿಂಚಣಿ ಪ್ರಯೋಜನಗಳು ಮತ್ತು ಅದರ ಮೇಲೆ ಗಳಿಸಿದ ಬಡ್ಡಿಯನ್ನು ಬಿಟ್ಟುಬಿಡತಕ್ಕದ್ದು.

(ಬಿ) ಕುಟುಂಬದ, ಕುಟುಂಬ ಪಿಂಚಣಿ, ಒಟ್ಟು ಮೊತ್ತದ ಪಿಂಚಣಿ ಪ್ರಯೋಜನಗಳು ಮತ್ತು ಅದರ ಮೇಲೆ ಗಳಿಸಿದ ಬಡ್ಡಿಯಲ್ಲದೇ, ಎಲ್ಲಾ ಮೂಲಗಳಿಂದ ಸಂಚಿತವಾಗುವ ಮಾಸಿಕ ಆದಾಯವನ್ನು ಈ ನಿಯಮದ ಉದ್ದೇಶಕ್ಕಾಗಿ ಕಚೇರಿಯ ಮುಖ್ಯಸ್ಥರು ಅಥವಾ ಇಲಾಖಾ ಮುಖ್ಯಸ್ಥರು ಅಥವಾ ನೇಮಕಾತಿ ಪ್ರಾಧಿಕಾರವು ಲೆಕ್ಕಹಾಕತಕ್ಕದ್ದು;

(i) ಮೃತ ಸರ್ಕಾರಿ ನೌಕರನು ದಾಖಲಿಸಿದ ಕೊನೆಯ ವಾರ್ಷಿಕ ಸ್ವತ್ತು ವಿವರಪಟ್ಟಿಕೆಯ ಆಧಾರದ ಮೇಲೆ ಮತ್ತು ಒಂದು ವೇಳೆ, ಯಾವುದೇ ಕಾರಣಕ್ಕಾಗಿ, ಅದು ಲಭ್ಯವಿಲ್ಲದಿದ್ದರೆ, ತಹಶೀಲ್ದಾರ್ ದರ್ಜೆಗಿಂತ ಕಡಿಮೆಯಿರದ ರಾಜಸ್ವ ಅಧಿಕಾರಿಯು ನೀಡಿದ ಆದಾಯ ಪ್ರಮಾಣಪತ್ರದ ಆಧಾರದ ಮೇಲೆ; ಮತ್ತು

(ii) ಒಂದು ವೇಳೆ ಮೃತ ಸರ್ಕಾರಿ ನೌಕರನ ಕುಟುಂಬದ ಯಾರೇ ಸದಸ್ಯನು ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆಯಲ್ಲಿ ಅಥವಾ ಸಾರ್ವಜನಿಕ ಅಥವಾ ಖಾಸಗಿ ವಲಯದ ಉದ್ದಿಮೆಗಳಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗವನ್ನು ಹೊಂದಿದ್ದರೆ, ಆತನ ಉದ್ಯೋಗದಾತರು ನೀಡಿರುವ ಪ್ರಮಾಣಪತ್ರದ ಆಧಾರದ ಮೇಲೆ ಮತ್ತು ಒಂದು ವೇಳೆ ಅಂತಹ ಸದಸ್ಯನು ಸ್ವಯಂ ಉದ್ಯೋಗಿಯಾಗಿದ್ದರೆ, ತಹಶೀಲ್ದಾರ್ ದರ್ಜೆಗಿಂತ ಕಡಿಮೆಯಿಲ್ಲದ ರಾಜಸ್ವ ಅಧಿಕಾರಿಯು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ.

[1][ಪರಂತು, (1)ನೇ ಉಪ-ನಿಯಮದಲ್ಲಿರುವುದಾವುದು ಸಮೂಹ-ಸಿ ಮತ್ತು ಡಿ ಗೆ ಸೇರಿರುವ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ.][1]

(2) ನೇಮಕಾತಿಯನ್ನು ಕೋರುವ ವ್ಯಕ್ತಿಯು, ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ 6ನೇ ನಿಯಮದ (3)ನೇ ಉಪನಿಯಮದೊಂದಿಗೆ ಓದಿಕೊಂಡಂತೆ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ಅದರಲ್ಲೂ ವಿಶೇಷವಾಗಿ ರಚಿಸಲಾದ ನೇಮಕಾತಿಯ ಯುಕ್ತ ನಿಯಮಗಳಲ್ಲಿ ಹುದ್ದೆಗಾಗಿ ನಿರ್ದಿಷ್ಟಪಡಿಸಲಾದ ವಯೋಮಿತಿಯೊಳಗೆ ಇರತಕ್ಕದ್ದು ಮತ್ತು ಹಾಗೆಂದು ನಿರ್ದಿಷ್ಟಪಡಿಸದಿರುವಲ್ಲಿ, ಅಂತಹ ವ್ಯಕ್ತಿಯು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ನಿರ್ದಿಷ್ಟಪಡಿಸಿದ ವಯೋಮಿತಿಗಳೊಳಗೆ ಇರತಕ್ಕದ್ದು.

[1][ಪರಂತು, ಮೇಲೆ ನಿರ್ದಿಷ್ಟಪಡಿಸಿದ ವಯಸ್ಸು, ಈ ನಿಯಮಗಳ ಮೇರೆಗೆ ನೇಮಕಾತಿಯನ್ನು ಕೋರುವ ಮೃತ ಸರ್ಕಾರಿ ನೌಕರನ ವಿಧವೆ ಅಥವಾ ವಿಧುರನಿಗೆ ಅನ್ವಯವಾಗತಕ್ಕದ್ದಲ್ಲ. ಈ ಅವಲಂಬಿತರಿಗಾಗಿನ ವಯೋಮಿತಿಯು ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಐವತ್ತೈದು ವರ್ಷಗಳನ್ನು ಮೀರಿರತಕ್ಕದ್ದಲ್ಲ.][1]

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.04.2021ರ ಮೂಲಕ ಸೇರಿಸಲಾಗಿದೆ.

(3) ನೇಮಕಾತಿಯನ್ನು ಕೋರುವ ವ್ಯಕ್ತಿಯು, ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ವಿಶೇಷವಾಗಿ ರಚಿಸಿದ ನೇಮಕಾತಿಯ ಯುಕ್ತ ನಿಯಮಗಳಲ್ಲಿ ಹುದ್ದೆಗಾಗಿ ನಿರ್ದಿಷ್ಟಪಡಿಸಲಾದ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.

[1][ಪರಂತು, ಈ ಉಪನಿಯಮದಲ್ಲಿ ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ 5ನೇ ನಿಯಮದ (5)ನೇ ಉಪನಿಯಮದಲ್ಲಿ ಇಲ್ಲದಿರುವುದಾವುದೂ, ಶೈಕ್ಷಣಿಕ ವಿದ್ಯಾರ್ಹತೆಗೆ ಅದು ಸಂಬಂಧಿಸುವಷ್ಟರಮಟ್ಟಿಗೆ, ಯಾವುದೇ ಗ್ರೂಪ್ 'ಡಿ' ಹುದ್ದೆಗೆ ಈ ನಿಯಮಗಳ ಮೇರೆಗೆ ನೇಮಕಾತಿಗಾಗಿ ಅನ್ವಯವಾಗತಕ್ಕದ್ದು.][1]

[2][(4) ನೇಮಕಾತಿಯು ಹುದ್ದೆಗಾಗಿ ನಿರ್ದಿಷ್ಟಪಡಿಸಲಾದ ವಿದ್ಯಾರ್ಹತೆಯನ್ನು ಅವಲಂಬಿಸಿ ಗ್ರೂಪ್-"ಸಿ" ಅಥವಾ "ಗ್ರೂಪ್" ಡಿಯಲ್ಲಿನ ಯಾವುದೇ ಹುದ್ದೆಗೆ ಸೀಮಿತಗೊಳಿಸತಕ್ಕದ್ದು. ಆದರೆ ಕಾಲಕಾಲಕ್ಕೆ ಪರಿಷ್ಕೃತವಾಗಬಹುದಾದಂಥ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಸಹಾಯಕ ಹುದ್ದೆಯ ವೇತನ ಶ್ರೇಣಿಗಿಂತ ಹೆಚ್ಚಿನ ವೇತನ ಶ್ರೇಣಿಗಳನ್ನು ಹೊಂದಿರುವ ಹುದ್ದೆಗಳನ್ನು ಮತ್ತು ಕಾಲಕಾಲಕ್ಕೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಸಮೂಹಗಳಲ್ಲಿನ ಯಾವುದೇ ಇತರ ಹುದ್ದೆಯನ್ನು ಹೊರತುಪಡಿಸಿ ಸೀಮಿತಗೊಳಿಸತಕ್ಕದ್ದು".][2]

(5) ನೇಮಕಾತಿಯನ್ನು ನೇರ ನೇಮಕಾತಿಯ ಖಾಲಿಹುದ್ದೆಗೆ ಪ್ರತಿಯಾಗಿ ಮಾತ್ರ ಮಾಡತಕ್ಕದ್ದು.

[3][(xxxxxxxxxxx)][3]

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 11 ಎಸ್‌ಸಿಎ 97, ದಿನಾಂಕ: 31.03.1999ರ ಮೂಲಕ ಪ್ರತ್ಯಾಯೋಜಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 19 ಎಸ್‌ಸಿಎ 99, ದಿನಾಂಕ: 24.11.2000ರ ಮೂಲಕ ಪ್ರತ್ಯಾಯೋಜಿಸಲಾಗಿದೆ.
3. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 11 ಎಸ್‌ಸಿಎ 97, ದಿನಾಂಕ: 31.03.1999ರ ಮೂಲಕ ಬಿಟ್ಟುಬಿಡಲಾಗಿದೆ.

(6) ನೇಮಕಾತಿಯನ್ನು ಮೃತ ಸರ್ಕಾರಿ ನೌಕರನು ಕಾರ್ಯನಿರ್ವಹಿಸುತ್ತಿದ್ದ ಇಲಾಖೆಯಲ್ಲಿಯೇ ಮಾಡತಕ್ಕದ್ದು;

ಪರಂತು, ಆ ಇಲಾಖೆಯಲ್ಲಿ ಯಾವುದೇ ಖಾಲಿ ಹುದ್ದೆಯು ಲಭ್ಯವಿಲ್ಲದಿದ್ದರೆ, ಸರ್ಕಾರವು ಹೊರಡಿಸಿರಬಹುದಾದಂಥ ಯಾವುದೇ ಸಾಮಾನ್ಯ ಆದೇಶಕ್ಕೆ ಒಳಪಟ್ಟು, ಖಾಲಿಹುದ್ದೆಯು ಲಭ್ಯವಿರುವಂಥ ಸರ್ಕಾರದ ಯಾವುದೇ ಇತರ ಇಲಾಖೆಯಲ್ಲಿ ನೇಮಕಾತಿಯನ್ನು ಮಾಡಬಹುದು.

**[1][5. ನೇಮಕಾತಿಗಾಗಿ ಅರ್ಜಿ:-**

ಈ ನಿಯಮಗಳ ಮೇರೆಗೆ ನೇಮಕಾತಿಯನ್ನು ಕೋರುವ, ಮೃತ ಸರ್ಕಾರಿ ನೌಕರನ ಪ್ರತಿಯೊಬ್ಬ ಅವಲಂಬಿತನು ಸರ್ಕಾರಿ ನೌಕರನ ಮರಣದ ದಿನಾಂಕದಿಂದ ಒಂದು ವರ್ಷದೊಳಗೆ, ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದಂಥ ನಮೂನೆಯಲ್ಲಿ, ಮೃತ ಸರ್ಕಾರಿ ನೌಕರನು ಕಾರ್ಯನಿರ್ವಹಿಸುತ್ತಿದ್ದಂಥ ಇಲಾಖೆಯ ಮುಖ್ಯಸ್ಥರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಪರಂತು, ಅಪ್ರಾಪ್ತ ವಯಸ್ಸಿನ ಸಂದರ್ಭದಲ್ಲಿ ಸರ್ಕಾರಿ ನೌಕರನ ಮರಣದ ದಿನಾಂಕದಿಂದ ಎರಡು ವರ್ಷಗಳೊಳಗೆ ಅವನು ಹದಿನೆಂಟು ವರ್ಷಗಳ ವಯಸ್ಸನ್ನು ಹೊಂದಿರತಕ್ಕದ್ದು ಮತ್ತು ಅವನು, ತದನಂತರ ಎರಡು ವರ್ಷಗಳೊಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.][1]

**6. ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ:-**

(1) ಇಲಾಖಾ ಮುಖ್ಯಸ್ಥರು, 5ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ ಅರ್ಜಿದಾರನು, ಈ ನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಲಾದ ಎಲ್ಲಾ ಷರತ್ತುಗಳನ್ನು ಪುರೈಸುತ್ತಾನೆಂದು ಮನವರಿಕೆಯಾದರೆ ಅವನನ್ನು ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಒಂದು ವೇಳೆ ಅಲ್ಲದಿದ್ದರೆ, ನೇಮಕಾತಿಯ ಆದೇಶವನ್ನು ನೀಡಲು ಸೂಕ್ತ ನೇಮಕಾತಿ ಪ್ರಾಧಿಕಾರಕ್ಕೆ ನಿರ್ದೇಶಿಸತಕ್ಕದ್ದು.

(2) (1)ನೇ ಉಪ-ನಿಯಮದ ಮೇರೆಗೆ ನೇಮಕಾತಿಯನ್ನು, 5ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳುಗಳ ಕಾಲಾವಧಿಯೊಳಗಾಗಿ ಸಾಧ್ಯವಾದಷ್ಟು ಬೇಗನೆ ಮಾಡತಕ್ಕದ್ದು.

(3) ಈ ನಿಯಮಗಳ ಮೇರೆಗಿನ ನೇಮಕಾತಿಗಾಗಿ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸುವ ಅಗತ್ಯವಿರತಕ್ಕದ್ದಲ್ಲ.

(4) ಈ ನಿಯಮಗಳ ಮೇರೆಗೆ ಒಮ್ಮೆ ಮಾಡಲಾದ ನೇಮಕಾತಿಯು ಅಂತಿಮವಾಗಿರತಕ್ಕದ್ದು ಮತ್ತು ಈ ನಿಯಮಗಳ ಮೇರೆಗೆ ಬೇರೆ ಹುದ್ದೆಗೆ ಅಥವಾ ಉನ್ನತ ಹುದ್ದೆಯ ಹೊಸ ನೇಮಕಾತಿಗೆ ಅನುಮತಿಸತಕ್ಕದ್ದಲ್ಲ.

(5) ಈ ನಿಯಮಗಳ ಮೇರೆಗೆ ನೇಮಕಾತಿಗಾಗಿ ಮೃತ ವ್ಯಕ್ತಿಯ ಮರಣದ ಸಂದರ್ಭದಲ್ಲಿ ಮರು-ನಿಯೋಜನೆಯಲ್ಲಿರುವ ಅಥವಾ ಸ್ಥಳೀಯ ಅಭ್ಯರ್ಥಿಯಾಗಿ, ಸ್ವೇಚ್ಛಾಘಂಡರಿ ಪದವಿದರನಾಗಿ ಉದ್ಯೋಗ ಮಾಡುತ್ತಿರುವ ಅಥವಾ ದಿನಗೂಲಿ ನೌಕರ ಅಥವಾ ಯಾವುದೇ ಕಾರ್ಯಸಂಸ್ಥೆಯಲ್ಲಿ ನೌಕರಿ ಮಾಡುತ್ತಿರುವ ಅಥವಾ ಸಾಂದರ್ಭಿಕ ನೌಕರಿಯಲ್ಲಿರುವಂತಹ ಮೃತ ವ್ಯಕ್ತಿಯ ಅವಲಂಬಿತರ ಸಂದರ್ಭದಲ್ಲಿ [1][ಅಥವಾ ಸಾದಿಲ್ವಾರುಗಳಿಂದ ಪಾವತಿಸಲಾಗುವ ಸಂದರ್ಭದಲ್ಲಿ ಪೂರ್ಣಕಾಲಿಕ ಅಥವಾ ಅರೆ-ಕಾಲಿಕ ನೌಕರರನ್ನು][1] ಪರಿಗಣಿಸತಕ್ಕದ್ದಲ್ಲ.

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.04.2021ರ ಮೂಲಕ ಪ್ರತ್ಯಾಯೋಜಿಸಲಾಗಿದೆ.

[1][ಪರಂತು, ಕರ್ನಾಟಕ ಸಿವಿಲ್ ಸೇವೆಗಳ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಎರಡನೇ ತಿದ್ದುಪಡಿ) ನಿಯಮಗಳು, 2020ರ ಪ್ರಾರಂಭದ ದಿನಾಂಕದಂದು ಬಾಕಿಯಿರುವ ಅರ್ಜಿಗಳನ್ನು ಈ ಸದರಿ ತಿದ್ದುಪಡಿ ನಿಯಮಗಳ ಪ್ರಾರಂಭಕ್ಕೂ ಮೊದಲು ಅಸ್ತಿತ್ವದಲ್ಲಿದ್ದ ಉಪಬಂಧಗಳಿಗೆ ಅನುಸಾರವಾಗಿ ವಿಲೇಮಾಡತಕ್ಕದ್ದು.][1]

[2][(6) ಯಾರೇ ಅಭ್ಯರ್ಥಿಯನ್ನು, ಸದರಿ ನಿಯಮಗಳಡಿಯಲ್ಲಿ ವಿನಾಯಿತಿ ನೀಡಿರುವವರನ್ನು ಹೊರತುಪಡಿಸಿ, ಕರ್ನಾಟಕ ಸಿವಿಲ್ ಸೇವೆಗಳು (ನೇಮಕಾತಿ) (ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1984ರ ಮೇರೆಗೆ ನಿಯಮಿಸಲಾದ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅವನು ತೇರ್ಗಡೆಯಾಗದ ಹೊರತು, ಈ ನಿಯಮಗಳ ಮೇರೆಗೆ ಗ್ರೂಪ್ "ಸಿ" ಹುದ್ದೆಗೆ ನೇಮಕಮಾಡತಕ್ಕದ್ದಲ್ಲ.][2]

[4][(7) ಈ ನಿಯಮಗಳ ಮೇರೆಗಿನ ನೇಮಕಾತಿಯನ್ನು, ಅರ್ಜಿಸಲ್ಲಿಕೆಯ ದಿನಾಂಕದಂದು ಚಾಲ್ತಿಯಲ್ಲಿರುವಂಥ ಉಪಬಂಧಗಳಿಗೆ ಅನುಸಾರವಾಗಿ ಮಾಡತಕ್ಕದ್ದು.][4]

**7. ಜ್ಯೇಷ್ಠತೆ:-**

ಈ ನಿಯಮಗಳ ಮೇರೆಗೆ ನೇಮಕಗೊಂಡ ವ್ಯಕ್ತಿಗಳ ಜ್ಯೇಷ್ಠತೆಯನ್ನು ಕರ್ತವ್ಯಕ್ಕೆ ಅವರು ವರದಿ ಮಾಡಿಕೊಂಡ ದಿನಾಂಕದಿಂದ ನಿರ್ಧರಿಸತಕ್ಕದ್ದು.

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 12 ಎಸ್‌ಸಿಎ 2010, ದಿನಾಂಕ: 27.07.2010, ಜಿಟಿಡಿ 29.07.2010ರ ಮೂಲಕ ಸೇರಿಸಲಾಗಿದೆ.
2. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 118 ಎಸ್‌ಸಿಎ 2009, ದಿನಾಂಕ: 28.06.2010ರ ಜಿಟಿಡಿ 03.07.2010ರ ಮೂಲಕ ಸೇರಿಸಲಾಗಿದೆ.
3. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 11 ಎಸ್‌ಸಿಎ 97 ದಿನಾಂಕ: 31.03.1999ರ ಮೂಲಕ ಪ್ರತ್ಯಾಯೋಜಿಸಲಾಗಿದೆ.
4. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 26 ಎಸ್‌ಸಿಎ 2018, ದಿನಾಂಕ: 09.04.2021ರ ಮೂಲಕ ಸೇರಿಸಲಾಗಿದೆ.

**8. ಇತರೆ ನಿಯಮಗಳ ಅನ್ವಯ:-**

ಈ ನಿಯಮಗಳ ಉಪಬಂಧಗಳಿಗೆ ಅವು ಅಸಂಗತವಾಗಿರದಷ್ಟರ ಮಟ್ಟಿಗೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ ಮೇರೆಗೆ ಮಾಡಲಾದ ಅಥವಾ ರಚಿಸಲಾಗಿದೆಯೆಂದು ಭಾವಿಸತಕ್ಕಂಥ ಸರ್ಕಾರಿ ನೌಕರರ ಸೇವೆಯ ಷರತ್ತುಗಳನ್ನು ನಿಯಂತ್ರಿಸುವ ಇತರ ಎಲ್ಲಾ ನಿಯಮಗಳು, ಈ ನಿಯಮಗಳ ಮೇರೆಗೆ ನೇಮಕಗೊಂಡ ವ್ಯಕ್ತಿಗಳಿಗೆ ಅನ್ವಯವಾಗತಕ್ಕದ್ದು.

**9. ಮಧ್ಯಕಾಲೀನ ಉಪಬಂಧಗಳು:-**

(1) 1994ರ ಅಕ್ಟೋಬರ್ ಇಪ್ಪತ್ತಕ್ಕೂ ಮೊದಲು ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ಮತ್ತು ಆ ದಿನಾಂಕದಂದು ಅಥವಾ ಅದರ ನಂತರ ಆದರೆ ಈ ನಿಯಮಗಳ ಪ್ರಾರಂಭದ ದಿನಾಂಕಕ್ಕಿಂತ ಮುಂಚಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಮತ್ತು ಈ ನಿಯಮಗಳ ಪ್ರಾರಂಭದ ದಿನಾಂಕದಂದು ಬಾಕಿಯಿರುವಂಥ ಅರ್ಜಿಗಳನ್ನು [2][5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯ ಒಳಗಾಗಿ ಸಲ್ಲಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ನಿಯಮಗಳ ಇತರೆ ಉಪಬಂಧಗಳಿಗೊಳಪಟ್ಟು ನೇಮಕಾತಿಗಾಗಿ ಪರಿಗಣಿಸತಕ್ಕದ್ದು.][2]

---

2. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 118 ಎಸ್‌ಸಿಎ 2009, ದಿನಾಂಕ: 28.06.2010ರ ಜಿಡಿಟಿ 03.07.2010 ಮೂಲಕ ಸೇರಿಸಲಾಗಿದೆ.

[1][(1ಎ) (1)ನೇ ಉಪ ನಿಯಮದ ಮೇರೆಗೆ ಸಲ್ಲಿಸಲಾದ ಯಾವುದೇ ಅರ್ಜಿಯನ್ನು, 5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಕಾಲಾವಧಿಯ ಒಳಗಾಗಿ ಸಲ್ಲಿಸಿಲ್ಲವೆಂಬ ಹಿನ್ನೆಲೆಯಲ್ಲಿ ತಿರಸ್ಕರಿಸಲಾಗಿದ್ದರೆ, ಅದನ್ನು ಈ ನಿಯಮಗಳ ಇತರೆ ಉಪಬಂಧಗಳಿಗೊಳಪಟ್ಟು ನೇಮಕಾತಿಗಾಗಿ ಮರುಪರಿಗಣಿಸತಕ್ಕದ್ದು.][1]

[2][(2) 1989ರ ಅಕ್ಟೋಬರ್‌ರ ಇಪ್ಪತ್ತನೇ ದಿನಾಂಕದ ನಂತರ ಮರಣಿಸಿದಂಥ ಮೃತ ಸರ್ಕಾರಿ ನೌಕರನ ಅವಲಂಬಿತನು, 1994ರ ಅಕ್ಟೋಬರ್‌ನ ಇಪ್ಪತ್ತನೇ ದಿನ ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1998ರ ಪ್ರಾರಂಭದ ದಿನಾಂಕದ ನಡುವೆ, ಯಾವುದೇ ಕಾರಣಗಳಿಗಾಗಿ ಅರ್ಜಿಯನ್ನು ಸಲ್ಲಿಸದಿರುವಲ್ಲಿ, ಅಂತಹ ಮೃತ ಸರ್ಕಾರಿ ನೌಕರನ ಅವಲಂಬಿತನು ಅಂತಹ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಕಾಲಾವಧಿಯ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅಂತಹ ಅರ್ಜಿಯನ್ನು 5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಕಾಲಾವಧಿಯೊಳಗಾಗಿ ಸಲ್ಲಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಈ ನಿಯಮಗಳ ಇತರೆ ಉಪಬಂಧಗಳಿಗೊಳಪಟ್ಟು ನೇಮಕಾತಿಗಾಗಿ ಪರಿಗಣಿಸತಕ್ಕದ್ದು:

ಪರಂತು, ಈ ಉಪ-ನಿಯಮವು ವಿಧುರನ ಸಂದರ್ಭದಲ್ಲಿ ಅನ್ವಯಿಸತಕ್ಕದ್ದಲ್ಲ.][2]

[3][ಮತ್ತೂ ಪರಂತು, ಮೃತ ಸರ್ಕಾರಿ ನೌಕರನ ವಿಧವಾ ಪುತ್ರಿಯು, ಕರ್ನಾಟಕ ಸಿವಿಲ್ ಸೇವೆಗಳ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 2000ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅಂತಹ ಅರ್ಜಿಯನ್ನು 5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಕಾಲಾವಧಿಯೊಳಗಾಗಿ ಸಲ್ಲಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ನಿಯಮಗಳ ಇತರೆ ಉಪಬಂಧಗಳಿಗೊಳಪಟ್ಟು ನೇಮಕಾತಿಗಾಗಿ ಪರಿಗಣಿಸತಕ್ಕದ್ದು.]

[4][(3) 1989ರ ಅಕ್ಟೋಬರ್ ಇಪ್ಪತ್ತನೇ ದಿನಾಂಕದಂದು ಅಥವಾ ಅದರ ನಂತರ ಮರಣ ಹೊಂದಿದಂಥ ಸರ್ಕಾರಿ ನೌಕರರ ಅವಲಂಬಿತರು, 1996ರ ಸೆಪ್ಟೆಂಬರ್ ಮೂವತ್ತನೇ ದಿನ ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 2002ರ ಪ್ರಾರಂಭದ ನಡುವೆ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು (ಅಂತಹ ಅವಲಂಬಿತರು 5ನೇ ನಿಯಮದ ಮೊದಲನೇ ಪರಂತುಕವನ್ನು ಉಲ್ಲಂಘಿಸಿ 1999ರ ಏಪ್ರಿಲ್‌ನ ಮೊದಲನೇ ದಿನದ ನಂತರ ಮತ್ತು ಅಂತಹ ಪ್ರಾರಂಭದ ದಿನಾಂಕದವರೆಗೆ ಸಲ್ಲಿಸಿದ ಅರ್ಜಿಗಳನ್ನು ಹೊರತುಪಡಿಸಿ)

(i) 5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಕಾಲಾವಧಿಯೊಳಗಾಗಿ ಅವರು ಸಲ್ಲಿಸಿಲ್ಲವೆನ್ನುವ ಕಾರಣಕ್ಕೆ ತಿರಸ್ಕರಿಸಿದ, ಅಥವಾ

(ii) ಪ್ರಾರಂಭದ ಅಂಥ ದಿನಾಂಕದಂದು ಬಾಕಿಯಿರುವಂತಹ ಎಲ್ಲಾ ಅರ್ಜಿಗಳನ್ನು 5ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಿದ ಕಾಲಾವಧಿಯೊಳಗಾಗಿ ಸಲ್ಲಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಮರುಪರಿಗಣಿಸತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಈ ನಿಯಮಗಳ ಇತರೆ ಉಪಬಂಧಗಳಿಗೊಳಪಟ್ಟು ನೇಮಕಾತಿಗಾಗಿ ಪರಿಗಣಿಸತಕ್ಕದ್ದು.

---

1. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 11 ಎಸ್‌ಸಿಎ 97, ದಿನಾಂಕ: 31.03.1999ರ ಮೂಲಕ ಸೇರಿಸಲಾಗಿದೆ.

2. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 11 ಎಸ್‌ಸಿಎ 97, ದಿನಾಂಕ: 31.03.1999ರ ಮೂಲಕ ಪ್ರತ್ಯಾಯೋಜಿಸಲಾಗಿದೆ.

3. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 19 ಎಸ್‌ಸಿಎ 99, ದಿನಾಂಕ: 24.11.2020ರ ಮೂಲಕ ಸೇರಿಸಲಾಗಿದೆ.

4. ಅಧಿಸೂಚನೆ ಸಂಖ್ಯೆ. ಡಿಪಿಎಆರ್ 11 ಎಸ್‌ಸಿಎ 2001, ದಿನಾಂಕ: 28.05.2002ರ ಮೂಲಕ ಸೇರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ. ವೆಂಕಟರಾಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)